# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಸಿ.ಡಬ್ಲ್ಯು 30
ಪಿ.ಡಬ್ಲ್ಯು 17

| | | |
|---|---|---|
| ಸಾಕ್ಷಿದಾರರ ಹೆಸರು | – | ಸಾಯಿಬಾಬಾ ಹರಿಕಂತ್ರ |
| ತಂದೆಯ ಹೆಸರು | – | ಜಟ್ಟಿ ಹರಿಕಂತ್ರ |
| ವಯಸ್ಸು | – | 53 ವರ್ಷ |
| ಉದ್ಯೋಗ | – | ಕೂಲಿ ಕೆಲಸ |
| ವಾಸ್ತವ್ಯ | – | ಅಗ್ರಗೋಣ, ಅಂಕೋಲಾ ತಾಲೂಕ |

(ಇಂದು ದಿನಾಂಕಃ 05–12–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನನಗೆ ಆರೋಪಿತರ ಪರಿಚಯ ಇಲ್ಲ. ಆರೋಪಿತರಿಗೆ ಯಾವುದೇ ಹಣ ಕೊಟ್ಟಿಲ್ಲ. ನೌಕರಿ ಕೊಡಿಸುವುದಾಗಿ ಆರೋಪಿತರು ನನ್ನ ಬಳಿ ಯಾವುದೇ ಪೋಟೊ, ದಾಖಲೆ, ಹಣ ಪಡೆದಿಲ್ಲ. ನನಗೆ ಆರೋಪಿತರು ಯಾವುದೇ ಮೋಸ ಮಾಡಿರುವುದಿಲ್ಲ. ಆರೋಪಿತರು ಮೋಸ ಮಾಡಿದ್ದಾರೆ ಎಂದು ನಾನು ಪೊಲೀಸ್ ಠಾಣೆಯಲ್ಲಿ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನನಗೆ ಕಿಮಾನಿಯ ಮೂಸಾ ಮಾಸ್ತರರವರ ಪರಿಚಯ ಇದೆ. ಅವರು ಒಂದು ದಿನ ನನಗೆ ಭೇಟಿಯಾದಾಗ ತನಗೆ ಪರಿಚಯ ಇರುವ ಜನರು ನೌಕರಿಯನ್ನು ಕೊಡಿಸುತ್ತಾರೆ , ನನಗೆ ಕೊಡಿಸುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ಅದರಂತೆ ನಾನು ದಿನಾಂಕಃ 19–10–2001 ರಂದು ಮೂಸಾ ಮಾಸ್ತರರ ಜೊತೆಗೆ ಕುಮಟಾಕ್ಕೆ ಬಂದು ಪೈ ಕಾಂಪ್ಲೆಕ್ಸಗೆ ಹೋದಾಗ ನನಗೆ 2, 3, 4 ಮತ್ತು 5 ನೇ ಆರೋಪಿತರ ಪರಿಚಯ ಮಾಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿತರು ತಮಗೆ

ರಾಜಕೀಯ ವ್ಯಕ್ತಿಗಳ ಪರಿಚಯ ಹಾಗೂ ದೊಡ್ಡ ದೊಡ್ಡ ಅಧಿಕಾರಿಗಳ ಪರಿಚಯ ಇರುತ್ತದೆ ಹಾಗೇ ಎಷ್ಟೋ ಜನರಿಗೆ ನೌಕರಿ ಮಾಡಿಕೊಡಿಸಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೇಲಿನಲ್ಲಿ ಖಾಲಿ ಇರುವ ವಾರ್ಡನ ಎಂದರೆ ಸುಪರವೈಸರ್ ನೌಕರಿಯನ್ನು ಕೊಡಿಸುತ್ತೇನೆ ಅದಕ್ಕೆ ರೂ. 45,000-00 ಹಣವನ್ನು ಕೊಡಬೇಕು ಎಂದು ಹೇಳಿದ್ದು, ಮುಂಗಡವಾಗಿ ರೂ. 5,000-00 ಹಾಗೂ ಅಂಕಪಟ್ಟಿ ಮತ್ತು ಭಾವಚಿತ್ರವನ್ನು ಕೊಡಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಅದೇ ದಿನ ರೂ. 5,000-00 ಹಾಗೂ ಅಂಕಪಟ್ಟಿ ಮತ್ತು ಭಾವಚಿತ್ರವನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಂತರ ನಾನು ಮೂಸಾ ಮಾಸ್ತರರ ಮಾತನ್ನು ನಂಬಿ ಪುನಃ 35,000-00 ಹಣವನ್ನು ದಿನಾಂಕಃ 14-01-2002 ರಂದು ಆರೋಪಿತರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನನಗೆ ಭೇಟಿಯಾಗದೇ, ನನಗೆ ನೌಕರಿಯನ್ನೂ ಕೊಡಿಸದೇ ನನಗೆ ನಂಬಿಸಿ ವಂಚನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 31-05-2002 ರಂದು ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.25 ಎಂದು ಗುರುತಿಸಲಾಯಿತು. ನಿ.ಪಿ.25 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ವಿ.ಜಿ. ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ